ಮಾಡಬೇಕಾದುದು ರೂಢಿಯಲ್ಲಿದೆ. ಅವರು ಒಂದು ವೇಳೆ ಸಮಾಲೋಚನೆ ಇದುವರೆವಿಗೂ ಮಾಡದಿದ್ದರೆ, ಸಮಾಲೋಚನೆ ಮಾಡಬೇಕಾದುದು ಅತ್ಯಗತ್ಯ. ಆದ್ದರಿಂದ ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಆದಷ್ಟು ಶೀಘ್ರವಾಗಿ ನೇಮಕ ಮಾಡುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದು ಕೊಂಡಿದೆ ಎಂಬುದನ್ನು ಕೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರು ಹೇಳಿದಂತಹ ವಿಷಯವನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ.

(v) ಬೆಳ್ತಂಗಡಿ ತಾಲ್ಲೂಕಿನ ಸಿ. ಎ. ಬ್ಯಾಂಕಿನ ಅವ್ಯವಹಾರದ ಬಗ್ಗೆ

ಶ್ರೀ ವಸಂತ ಬಂಗೇರ — ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಸಿ.ಎ. ಬ್ಯಾಂಕಿನಲ್ಲಿ ಹಿಂದೆ ಇದ್ದಂತಹ ಅಧ್ಯಕ್ಷರು ಅವ್ಯವಹಾರ ಮಾಡಿರುವ ಬಗ್ಗೆ ಅವರ ಮೇಲೆ ವ್ಯಾಜ್ಯ ನಡೆಯುತ್ತಿದೆ. ಈ ವರ್ಷ ಚುನಾವಣೆಯಲ್ಲಿ 9ಜನರ ಒಂದು ಗುಂಪು ಮತ್ತು 6 ಜನರ ಇನ್ನೊಂದು ಗುಂಪು, ಈ ಪ್ರಕಾರವಾಗಿ ಚುನಾಯಿತರಾಗಿದ್ದಾರೆ. 9 ಜನರ ಗುಂಪು, ಚುನಾವಣೆಯ ದಿನವನ್ನು ಮುಂದೂಡಿ ಒಂದು ಅರ್ಜಿ ಸಲ್ಲಿಸಿದ್ದಾರೆ. ಆದರೆ 6 ಜನ ಇರತಕ್ಕಂತಹ ಮತ್ತೊಂದು ಗುಂಪು, ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಪತ್ತಿರ ಬೆಳ್ತಂಗಡಿಯಲ್ಲಿರುವ ಸಿ.ಇ.ಒ. ಮುಖಾಂತರ ಪಿತೂರಿ ನಡೆಸಿ ಈ 9 ಜನರ ಗುಂಪು ಯಾವಾಗ ಊರಿನಲ್ಲಿ ಇಲ್ಲದ ಸಮಯವನ್ನು ನೋಡಿ ಚುನಾವಣೆಯ ದಿನಾಂಕವನ್ನು ನಿಗದಿ ಮಾಡಿ, ಆ ದಿವಸ ಆಲ್ಲಿಗೆ ಬಂದು ಅವರಲ್ಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆ. ಆ ರೀತಿ ಆಯ್ಕೆ ಮಾಡಿದಂತಹ ಅಧ್ಯಕ್ಷರಾದರೂ ಯಾರೆಂದರೆ, ಹಿಂದೆ 75-76ರಲ್ಲಿ ಏನು ಅವ್ಯವಹಾರ ಮಾಡಿದ್ದಾರೆಂದು ವ್ಯಾಜ್ಯ ನಡೆಯುತ್ತಿದೆಯೋ ಅವರನ್ನೇ ಪುನಃ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಆದ್ದರಿಂದ ಇದರಲ್ಲಿ ಆಕ್ರಮ ವ್ಯವಹಾರ ಮಾಡಿದಂತಹ ಅಧಿಕಾರಿಗಳನ್ನು ತಕ್ಷಣ ಅಮಾನತ್ತಿನಲ್ಲಿಟ್ಟು, ಇದರ ಬಗ್ಗೆ ತನಿಖೆ ನಡೆಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್ ಎಲ್. ಜಾಲಪ್ಪ.— ನಾನು ಈಗ ತಾನೆ ಬಂದಿದ್ದೇನೆ. ವಿವರಗಳನ್ನು ನಾಳೆ ತರಿಸಿ ಕೊಡುತ್ತೇನೆ.

ಅಧ್ಯಕ್ಷರು.— ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ, ನೀವು ಕೇಳಿರುವ ವಿಷಯವನ್ನು ಗಮನ ಸೆಳೆಯುವ ಸೂಚನೆಯ ಮೂಲಕವೂ ಕಳಿಸಿದ್ದೀರಿ. ಇಲ್ಲಿ 334ರ ಒಳಗೆ ಕಳಿಸಿದರೆ ಉತ್ತರ ಕೊಡಲೇ ಬೇಕೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಪ್ರತಾಪಚಂದ್ರ ಶೆಟ್ಟಿ.— ಗಮನ ಸೆಳೆಯುವ ಸೂಚನೆಯನ್ನು ಕಳಿಸಿದ್ದೇನೆ. ಯಾವುದರಲ್ಲೂ ಉತ್ತರ ಬಂದಿಲ್ಲ. ಯಾವಾಗ ಉತ್ತರ ಕೊಡುತ್ತೇವೆ ಎಂದು ಕೂಡ ಹೇಳಿಲ್ಲ.

ಅಧ್ಯಕ್ಷರು.— ಶ್ರೀ ನಾಣಯ್ಯನವರೇ ನೀವು ಹೇಳಿ.

vi) ಕೊಡಗು ಜಿಲ್ಲೆಯಲ್ಲಿ ಸರ್ಕಾರಿ ವೈದ್ಯರುಗಳ ನೇಮಕಾತಿ

ಶ್ರೀ ಎಂ. ಎಂ. ನಾಣಯ್ಯ — ಕೊಡಗು ಜಿಲ್ಲೆಯಲ್ಲಿ 36 ಸರ್ಕಾರಿ ವೈದ್ಯರ ಹುದ್ದೆಗಳು ಖಾಲಿ ಬಿದ್ದಿವೆ. ಪೆಡ್‌ಕ್ವಾಟರ್ಸ್ ಆಸ್ಪತ್ರೆಯಲ್ಲಿ 14 ಹುದ್ದೆಗಳೂ, ಗ್ರಾಮಾಂತರ ಪ್ರದೇಶಗಳಲ್ಲಿ 22 ವೈದ್ಯರ ಹುದ್ದೆಗಳು ಒಟ್ಟು 36 ಹುದ್ದೆಗಳು ಖಾಲಿಯಿವೆ. ಇಲ್ಲಿಯ ಜನರು ವೈದ್ಯಕೀಯ ಸೌಲಭ್ಯ ಈ ಆಸ್ಪತ್ರೆಗಳಲ್ಲಿ ಸಿಗದೆ ತುಂಬಾ ತೊಂದರೆಗೊಳಗಾಗಿದ್ದಾರೆ. ಹೀಗಾಗಿ ಇವರು ಖಾಸಗಿ ನರ್ಸಿಂಗ್ ಹೋಮ್‌ಗಳಲ್ಲಿ ಚಿಕಿತ್ಸೆ ಪಡೆಯಬೇಕಾದ ಪರಿಸ್ಥಿತಿ ಬಂದಿದೆ. ಅನೇಕ ಜನರಿಗೆ ಇಲ್ಲಿ ಚಿಕಿತ್ಸೆ ಪಡೆಯುವುದು ಬಹಳ ದುಬಾರಿಯಾಗಿದೆ ಆದ್ದರಿಂದ ಸರ್ಕಾರ ತಕ್ಷಣ ಕ್ರಮ ತೆಗೆದುಕೊಂಡು ಖಾಲಿ ಬಿದ್ದಿರುವ 36 ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ — ನಾನು ಆರೋಗ್ಯ ಮಂತ್ರಿಗಳಿಗೆ ಈ ವಿಚಾರ ತಿಳಿಸಿ ಇದರ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಕೆ. ಕಾಂತಾ. — ಅಧ್ಯಕ್ಷರೇ, ಸರ್ಕಾರಿ ಡೈರಿ ಹಾಲು ವಿತರಣೆ ಮಾಡಲಿಕ್ಕೆ ಹೆಂಡರು ಗಳಿಗೆ ಕಮಿಷನ್ ಮೂರರಷ್ಟು ಸಿಗುತ್ತಿತ್ತು ಹೋದ ತಿಂಗಳವರೆಗೆ .....

ಅಧ್ಯಕ್ಷರು.— ಮಾನ್ಯ ಕಾಂತಾರವರೇ ನೀವು ಗಮನ ಸೆಳೆಯುವ ಸೂಚನೆಯನ್ನೂ ಕಳಿಸಿದ್ದೀರಿ. ಈಗ ಮಂತ್ರಿಗಳು ಉತ್ತರ ಹೇಳಿಬಿಟ್ಟರೆ ಮತ್ತೆ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಗಮನ ಸೆಳೆಯುವ ಸೂಚನೆಗೆ ಪೂರ್ಣ ಪ್ರಮಾಣದ ಉತ್ತರ ಬರುತ್ತದೆ. ಆದಕ್ಕಾಗಿ ನೀವು ಕಾಯುವುದಾದರೆ ಈಗ ಕೇಳಬೇಡಿ.

ಶ್ರೀ ಎಸ್. ಕೆ. ಕಾಂತಾ.—ಗಮನ ಸೆಳೆಯುವ ಸೂಚನೆ ಬರುವುದಾದರೆ ಈಗ ನಾನು ಕೇಳುವುದಿಲ್ಲ.

ಶ್ರೀ ಎಫ್. ಎ. ಕೊಪ್ಪದ್.— ಅಧ್ಯಕ್ಷರೇ, ರಾಮದುರ್ಗ ತಾಲ್ಲೂಕಿನಲ್ಲಿ ಮುನ್ನೂರು ಸಾಮಿಲ್ ಗಳಿವೆ. ವಿದ್ಯುಚ್ಛಕ್ತಿ ಕೊರತೆಯಿಂದ ಅವುಗಳು ಬಹಳ ತೊಂದರೆಗೆ ಒಳಗಾಗಿವೆ. ಅವರು ಚಳುವಳಿ ನಡೆಸುವ ಸಂಭವ ಇದೆಯೆಂದು ತಿಳಿದುಬಂದಿದೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆಯುಂಟಾಗಿದೆಯೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಇದರ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡಿ ಗ್ರಾಮಾಂತರ ಪ್ರದೇಶಗಳಲ್ಲೂ ಕೂಡ ತೊಂದರೆಯಾಗದಂತೆ ಇರುವ ವಿದ್ಯುತ್ತನ್ನು ಸಮಾನವಾಗಿ ಹಂಚಿಕೆಯ ಪ್ರಯತ್ನ ನಡೆಸುವುದಾಗಿ ಅವರು ಹೇಳಿದ್ದಾರೆ. ಇದರ ಬಗ್ಗೆ ಪೂರ್ಣವಾದ ಹೇಳಿಕೆಯನ್ನು ಅವರು ನಾಳೆ ಕೊಡಬಹುದು ಅಥವಾ ಇವತ್ತೇ ಕೊಡಬಹುದೆಂದು ನಾನು ಭಾವಿಸುತ್ತೇನೆ.

ಅಧ್ಯಕ್ಷರು.— ಮಾನ್ಯ ಪಂಪಾಪತಿಯವರೇ, ನಿಮ್ಮ ಪ್ರಶ್ನೆಯನ್ನು ಶ್ರೀಮಾನ್ ಧನಂಜಯ ಕುಮಾರ್ ಅವರು ಈಗಾಗಲೇ ಹೇಳಿಬಿಟ್ಟಿದ್ದಾರೆ.

4. ನಿಯಮ 334ರ ಮೇರೆಗೆ

Reg (i) Agricultural farm Labour wages of Javalagere farm in Raichur District.

ಶ್ರೀ ಪಂಪಾಪತಿ.— ಅಧ್ಯಕ್ಷರೇ, ನಿನ್ನೆ 334ರ ಮೇಲೆ ಪ್ರಶ್ನೆ ಎತ್ತಿದ್ದಕ್ಕೆ ಸಂಬಂಧಪಟ್ಟ ಸಚಿವರು ಉತ್ತರವನ್ನು ತರಿಸಿಕೊಂಡಿದ್ದಾರೆ. ಅದನ್ನು ಅವರು ಹೇಳಬಹುದು.

Sri Aziz Sait (Minister for Labour and Wakfs).— Sir, with your kind permission, I make the following statement :

The agricultural farm at Javalagere in Raichur District is a Central Farm coming under the Central State Farms Corporation, and it is not a State-governed farm. Secondly, the agricultural labourers of the farm are agitating for the wages, as there wages are less than the wages being paid to the agricultural labourers in Sindhanoor taluk comparatively. The Deputy Commissioner, Raichur, said that the labourers are being paid minimum wages, but the wages are being paid on she classification of the land as 'Dry land' and not 'wet land', and hence the difference. To classify the land as 'Wet land', there seems to be some snag in the present rules, i.e., the classification has to be done based on the rainfall, and not the irrigation conditions. Hence the land could not be classified as 'Wet land', though the whole taluk is under irrigation.

Secondly Mr. Arora, IAS, Managing Director of the Corporation, had come to Javalagere, and the Deputy Commissioner, has discussed the above issue with him, and as per him, it is only the Board of the Corporation, which has to take a decision to enhance the wages, as at present the agricultural labourers are being paid minimum wages based on the classification of the land as 'Dry land', The D. C. has requested him to bring this to the notice of the Board and to prevail upon the Board to enhance the wages, as a special case. The DC has also addressed a letter to him in this connection. The Board has not yet taken a decision in this regard.

With regard to the conciliation before the Labour Department, the DC said that the local officers of the above farm are not in a position to make any commitment in this regard, as it is the Board which is empowered to take a decision. The DC also said that sufficient police force has been sent to Javalagere to see that nothing goes out of control.

I will take up the matter personally and ensure that justice is rendered to the labourers. I reques to the labourers through this